ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22131385 E-Mail ID: registrar@bcu.ac.in

ಸಂಖ್ಯೆ: ಬೆಂ.ನ.ವಿ./ವಿ.ಕ.ಕ.ಹ/2024–25/325 ದಿನಾಂಕ: 08.11.2024

## ಸುತ್ತೋಲೆ

**ವಿಷಯ:** ದಿನಾಂಕ 09 ಮತ್ತು 10 ನವೆಂಬರ್ 2024 ರಂದು ವಿಶ್ವವಿದ್ಯಾನಿಲಯವು ಕಾರ್ಯನಿರ್ವಹಿಸುವ ಕುರಿತು.

**ಉಲ್ಲೇಖ:** 1. ವಿ.ವಿ. ಸುತ್ತೋಲೆ ದಿನಾಂಕ: 07.11.2024.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08.11.2024.

*–*–*

ಉಲ್ಲೇಖಿತ (1) ರ ಸುತ್ತೋಲೆಯ ಮುಂದುವರೆದ ಭಾಗವಾಗಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಮತ್ತು ವಿಜಯ ಕರ್ನಾಟಕ ಪತ್ರಿಕಾ ಸಂಸ್ಥೆಯ ಸಹಯೋಗದೊಂದಿಗೆ ದಿನಾಂಕ: 09 ಮತ್ತು 10 ನವೆಂಬರ್ 2024 ರಂದು ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜು ಆವರಣದಲ್ಲಿ **"ವಿಜಯ ಕರ್ನಾಟಕ ಕನ್ನಡ ಹಬ್ಬ"** ವನ್ನು ಆಚರಿಸಲಾಗುತ್ತಿದೆ. ಹಾಗಾಗಿ, **"ವಿಜಯ ಕರ್ನಾಟಕ ಕನ್ನಡ ಹಬ್ಬ"** ದಲ್ಲಿ ವಿಶ್ವವಿದ್ಯಾನಿಲಯ ಭಾಗವಹಿಸಬೇಕಾಗಿರುವುದರಿಂದ ಸಾರ್ವತ್ರಿಕ ರಜಾ ದಿನಗಳಾದ ದಿನಾಂಕ: **09.11.2024** (Full Day) ಮತ್ತು ದಿನಾಂಕ: **10.11.2024** (Half Day) ರಂದು ವಿಶ್ವವಿದ್ಯಾನಿಲಯವು ಎಂದಿನಂತೆ ಕಾರ್ಯನಿರ್ವಹಿಸಲಿದೆ. ಆದುದರಿಂದ ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ/ಬೋಧಕೇತರ ನೌಕರರು/ವಿದ್ಯಾರ್ಥಿಗಳು ಮೇಲ್ಕಂಡ ದಿನಾಂಕದಂದು ತಪ್ಪದೇ ಎಂದಿನಂತೆ ಕಛೇರಿ ಕೆಲಸಕ್ಕೆ/ತರಗತಿಗಳಿಗೆ ಹಾಜರಾಗುವಂತೆ ಸೂಚಿಸಲಾಗಿದೆ.

ದಿನಾಂಕ: **10.11.2024** ರಂದು ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದರಿಂದ ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ ಬೋಧಕ/ಬೋಧಕೇತರ ನೌಕರರು/ವಿದ್ಯಾರ್ಥಿಗಳು ಬೆಳಗ್ಗೆ 09:00 ಗಂಟೆಗೆ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಸೀನರಾಗಲು ತಿಳಿಸಲಾಗಿದೆ.

ಮುಂದುವರೆದು, ದಿನಾಂಕ: 09.11.2024 (2ನೇ ಶನಿವಾರ) ರ ಬದಲಾಗಿ ದಿನಾಂಕ: 16.11.2024 (3ನೇ ಶನಿವಾರ) ರಂದು ವಿಶ್ವವಿದ್ಯಾನಿಲಯಕ್ಕೆ ರಜೆಯನ್ನು ಘೋಷಿಸಲಾಗಿದೆ.

ಕುಲಸಚಿವರು (ಆ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಆವರಣ
ಬೆಂಗಳೂರು - 560 001

ಗೆ,

1. ಕುಲಸಚಿವರು (ಮೌ), ಬೆಂ.ನ.ವಿ, ಬೆಂಗಳೂರು.
2. ವಿತ್ತಾಧಿಕಾರಿಗಳು, ಬೆಂ.ನ.ವಿ., ಬೆಂಗಳೂರು.
3. ಎಲ್ಲಾ ನಿಕಾಯಗಳ ಡೀನರು, ಬೆಂ.ನ.ವಿ., ಬೆಂಗಳೂರು.
4. ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥರು, ಬೆಂ.ನ.ವಿ, ಬೆಂಗಳೂರು.
5. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.
6. ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳು, ಬೆಂ.ನ.ವಿ, ಬೆಂಗಳೂರು.
7. ಎಲ್ಲಾ ಸಂಯೋಜಿತ/ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರು, ಬೆಂ.ನ.ವಿ, ಬೆಂಗಳೂರು.

ಪ್ರತಿಗಳು:

1. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ)/ವಿತ್ತಾಧಿಕಾರಿಗಳು, ಆಪ್ತ ಕಾರ್ಯದರ್ಶಿಯವರುಗಳಿಗೆ, ಬೆಂ.ನ.ವಿ., ಬೆಂಗಳೂರು.
2. ಕಛೇರಿ ಪ್ರತಿ / ರಕ್ಷಾಕಡತ / ಜಾಲತಾಣ.